ಅಗುಳನ್ನೂ ಚಿನ್ನದಲ್ಲಿ ಒಂದು ಒರೆಯನ್ನೂ ಇಂದಿಂಗೆ ನಾಳಿಂಗೆ ಇಟ್ಟುಕೊಳ್ಳಲಾರೆ ಎಂದ ಬಸವಣ್ಣನ ಸರಳಜೀವನದ ಕಲ್ಪನೆಯನ್ನು ವಿಶ್ಲೇಷಿಸಿದೆ. ಪರಮ ಭೋಗಿಗಳಾದ ನಮಗೆ ಶರಣರ ಉತ್ತರಾಧಿಕಾರಿಗಳಾಗಲು ನೈತಿಕತೆ ಇದೆಯೇ ಎಂದೆಲ್ಲ ಮೇಜುಕುಟ್ಟಿ ಕ್ರಾಂತಿಕಾರಕವಾಗಿ ಮಾತಾಡಿದೆ. ಭಾಷಣದ ಪರಿಣಾಮವನ್ನು ನೋಡಲು ನನ್ನ ಸಹಭಾಷಣಕಾರ ಮುಖ ನೋಡಿದೆ. ಅವರು ತಲೆಯಲ್ಲಾಡಿಸುತ್ತ ಚೀಟಿಯಲ್ಲಿ ಏನನ್ನೊ ಬರೆದುಕೊಳ್ಳುತ್ತ ಅದಕ್ಕೆ ಬಾಣದ ಗುರುತು ಹಾಕುತ್ತ ಇದ್ದರು. ಅದು ನನ್ನ ಮೇಲೆ ಎರಗಲಿರುವ ಕಚ್ಚಾಬಾಂಬಿನ ತಯಾರಿಕೆ ಎನ್ನುವುದು ಗೊತ್ತೇ ಆಗಲಿಲ್ಲ. ಭಾಷಣ ಮುಗಿಸಿ ಹಬ್ಬಕ್ಕೆ ತಂದ ಹರಕೆಯ

